ಕರ್ನಾಟಕ ವಿಧಾನ ಸಭೆ

ಬುಧವಾರ, 24ನೇ ಆಗಸ್ಟ್ 1983/ಭಾದ್ರಪದ 2, 1905

ವಿಧಾನ ಸೌಧದಲ್ಲಿರುವ ವಿಧಾನ ಸಭೆಯು ಸದನದ ಸಂಭಾಗಣದಲ್ಲಿ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅಧ್ಯಕ್ಷ ಪೀಠವನ್ನಲಂಕರಿಸಿದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಕೊಡಲಾದ ಉತ್ತರಗಳು

ವಿಷಯ :– ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿರುವ ಕೊಳವೆ ಬಾವಿಗಳು

ಪ್ರ. 134 (92) ಶ್ರೀ ಹೆಗಲಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಸರಕಾರವು ಅಧಿಕಾರ ವಹಿಸಿಕೊಂಡನಂತರ 10–1–83 ರಿಂದ ಈವರೆಗೆ ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದೆ ?

ಶ್ರೀ ಎಂ.ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಮಂತ್ರಿಗಳ ಪರವಾಗಿ ;—

ಅ. ಪ್ರಚಲಿತ ಸರಕಾರವು ಅಧಿಕಾರ ವಹಿಸಿಕೊಂಡ ನಂತರ ಅಂದರೆ 10–1–83 ರಿಂದ 31–7–83ರ ವರೆಗೆ 50 ಕೊಳವೆ ಬಾವಿಗಳನ್ನು ಧಾರವಾಡ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ತೋಡಲಾಗಿದೆ;

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.—ನಾನು ಕೇಳಿದ ಪ್ರಶ್ನೆಯ ರೂಪವೇ ಬೇರೆ. ನಾನು ಪ್ರಶ್ನೆಯನ್ನು ಕೇಳಿದ್ದ ಉದ್ದೇಶವೇನೆಂದರೆ, ಕನಕಪುರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿದ್ದಾರೆ ಎಂದು ತಿಳಿಯುವುದಕ್ಕೆ. ಆದರೆ ಬ್ಯಾಡಗಿಯಲ್ಲಿ ಈವರೆಗೆ ಕೇವಲ 50 ಬಾವಿಗಳನ್ನು ಮಾತ್ರ ತೋಡಿದ್ದಾರೆ. ಮತ್ತು ಕನಕಪುರ ತಾಲ್ಲೂಕಿನಲ್ಲೂ ಕೂಡ ಲಂಬಾಣಿ ತಾಂಡಗಳು ಇವೆ. ಅಲ್ಲೂ ಬಾವಿಗಳನ್ನು ತೋಡಿದ್ದಾರೆಯೇ ಎಂಬುದರ ಬಗ್ಗೆ ವಿವರಣೆ ಬೇಕು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತ್ ರಾಜ್ ಮಂತ್ರಿಗಳ ಪರವಾಗಿ).—ಸನ್ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆ ಬ್ಯಾಡಗಿ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾದ್ದರಿಂದ, ಅದಕ್ಕೆ ಉತ್ತರವನ್ನು ಒದಗಿಸಲಾಗಿದೆ. ಕನಕಪುರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಿಸಿದ್ದಾರೆಂಬುದು ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲವಾದ್ದರಿಂದ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಲಾಗುವುದು. ಬ್ಯಾಡಗಿ ತಾಲ್ಲೂಕಿನಲ್ಲಿ ಬರಗಾಲದ ನಿಮಿತ್ತ ತೆಗೆದುಕೊಂಡಂತಹ ಕಾರ್ಯಕ್ರಮಗಳಲ್ಲಿ 240 ಕೊಳವೆ ಬಾವಿಗಳನ್ನು ತೋಡಲಾಗಿದೆ. ಆ 240 ಕೊಳವೆ ಬಾವಿಗಳಿಗೂ ಕೂಡ ನಳವನ್ನೂ ಅಳವಡಿಸಲಾಗಿದೆ. ಈಗಿನ ಸರ್ಕಾರ ಅಧಿಕಾರವನ್ನು ವಹಿಸಿಕೊಂಡ 6 ತಿಂಗಳೊಳಗಾಗಿ (10–1–83 ರಿಂದ 31–7–83ರ ವರೆಗೆ) 50 ಕೊಳವೆ ಭಾವಿಗಳನ್ನು ತೋಡಲಾಗಿದೆ. ಒಟ್ಟು 220 ಭಾವಿಗಳಿಗೂ ಕೈ ಪಂಪುಗಳನ್ನು ಹಾಕಲಾಗಿದೆ. ಇದರಲ್ಲಿ ಅಲಕ್ಷ್ಯ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಲಮಾಣಿ ಹೆಗ್ಗಪ್ಪ ದೇಶಪ್ಪ.—ಲಂಬಾಣಿ ತಾಂಡಾಗಳಿಗೂ ಕೊಳವೆ ಬಾವಿಗಳನ್ನು ಹಾಕಿದ್ದೀರಾ ? ಹಿಂದಿನ ಬಾಕಿಯನ್ನು ತೆಗೆದುಬಿಟ್ಟು, ಮುಂದೆ ಬಾಕಿ ಎಷ್ಟು ತಾಂಡಾಗಳಲ್ಲಿ ಭಾವಿಗಳನ್ನು ತೋಡಬೇಕಾಗಿದೆ. ಇಂತಹ ಎಷ್ಟು ತಾಂಡಾಗಳಲ್ಲಿ ಎಷ್ಟು ಕೊಳವೆ ಬಾವಿಗಳನ್ನು ಹಾಕಿದ್ದೀರಿ ? ಎಲ್ಲಾ ತಾಂಡಾಗಳಿಗೂ ಹಾಕಿದ್ದೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಈಗ ಕೊಟ್ಟಿರತಕ್ಕಂತಹ ಪ್ರಶ್ನೆಯ ವ್ಯಾಪ್ತಿಯನ್ನು ಅನುಸರಿಸಿ ಉತ್ತರವನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಇದಕ್ಕೆ ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಒದಗಿಸಲಾಗುವುದು.

ವಿಷಯ :–ವ್ಯವಸಾಯ ಕಾಲೇಜನ್ನು ಮೂಡಿಗೆರೆಯಲ್ಲಿ ಪ್ರಾರಂಭಿಸುವ ಬಗ್ಗೆ.

ಪ್ರ. 135(33) ಶ್ರೀ ಪಿ. ತಿಪ್ಪಯ್ಯ (ಮೂಡಿಗೆರೆ).—ಮಾನ್ಯ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—